ಮಂಗಳೂರು ಅಭಿವೃದ್ಧಿ ಪ್ರಾಧಿಕಾರ

೧೪೨೨. ಶ್ರೀ ಎಚ್. ಎಂ. ಅಡ್ಯಂತಾಯ (ಸೂರತ್ಕಲ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಗೊಂಡಿರುವುದು ಯಾವಾಗ ?

ಆ) ಮಂಗಳೂರು ನಗರದಲ್ಲಿ ಸಾರ್ವಜನಿಕರಿಗೆ ನಿವೇಶನ ಒದಗಿಸಲು ಈವರೆಗೆ ಪ್ರಾಧಿಕಾರ ವಶಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣ ವೆಷ್ಟು ?

ಇ) ಮಂಗಳೂರು ಸಿ.ಐ.ಟಿ.ಬಿ. ಈವರೆಗೆ ನಿವೇಶನ ಒದಗಿಸಿರುವ ಜನರ ಸಂಖ್ಯೆ ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ದಿನಾಂಕ ೧-೧-೧೯೮೮ ರಿಂದ ಜಾರಿಗೆ ಬಂದಿದೆ.

ಆ) ಮಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ ೧೬-೫-೧೯೮೮ ರಂದು ರಚನೆಯಾಗಿರುವುದರಿಂದ ಯಾವುದೇ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ.

ಇ) ೧೪೭ ನಿವೇಶನಗಳನ್ನು ಈವರೆಗೆ ನಗರಾಭಿವೃದ್ಧಿ ಮಂಡಳಿ, ಮಂಗಳೂರು ಇವರಿಂದ ಹಂಚಲಾಗಿರುತ್ತದೆ.

ರೈತರಿಗೆ ಒದಗಿಸಿದ ಬೋರ್‌ವೆಲ್‌ಗಳ ಬಗ್ಗೆ

೧೪೪೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸನ್ ೧೯೮೬-೮೭ ಮತ್ತು ೮೭-೮೮ನೇ ಸಾಲಿನಲ್ಲಿ ಸರ್ಕಾರದವರು ಕೋಲಾರ ಜಿಲ್ಲೆಯಲ್ಲಿ ಕೊರೆಯಿಸಿದ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ).

ಆ) ಆ ಬೋರ್‌ವೆಲ್‌ಗಳಿಂದ ಉಪಯೋಗಿಸಿದ ನೀರಿಗೆ ರೈತರಿಂದ ವಸೂಲಾತಿ ಮಾಡಿದ ಒಟ್ಟು ಹಣವೆಷ್ಟು ? (ತಾಲ್ಲೂಕುವಾರು ಮಾಹಿತಿ).

ಇ) ಕೊರೆದ ಬೋರ್‌ವೆಲ್‌ಗಳಿಗೆ ಆದ ಒಟ್ಟು ಖರ್ಚು ಎಷ್ಟು ?